


## ಯುವಶಕ್ತಿ

❑ ಕಳಸಾಪುರ ಸೀತಾರಾಮಶಾಸ್ತ್ರೀ

ದೇಶೋದ್ಧಾರದ ಕೀಲಿಕೈ ಯುವಕರ ಕೈಯಲ್ಲಿದೆ, ಅವರು ಉನ್ನತ ಆದರ್ಶಗಳಿಂದ ಪ್ರೇರಿತರಾಗಿ ಕಾರ್ಯೋನ್ಮುಖರಾದರೆ ಸಮಾಜದ ಎಲ್ಲ ಪಿಡುಗುಗಳನ್ನು ನಿವಾರಿಸಬಹುದು—ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವ ಶ್ರೀ ಸೀತಾರಾಮ ಶಾಸ್ತ್ರಿಯವರು ಕಳಸಾಪುರದ ಹಿರಿಯ ಪ್ರೌಢಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯರು.

**ಯು**ವಶಕ್ತಿಯೇ ದೇಶದ ಜನಶಕ್ತಿ. ಕವಿ ಗೋಪಾಲಕೃಷ್ಣ ಅಡಿಗರು "ಕಟ್ಟುವೆವು ನಾವು" ಎಂಬ ತಮ್ಮ ಕವಿತೆಯಲ್ಲಿ ದೇಶದ ಯುವಜನತೆಯ ಪರವಾಗಿ "ಕಟ್ಟುವೆವು ನಾವು ಹೊಸ ನಾಡೊಂದನು, ರಸದ ಬೀಡೊಂದನು" ಎಂದು ಪ್ರಾರಂಭಿಸುತ್ತಾ ಯುವಜನತೆಯಿಂದ ಸದೃಢ ಭಾರತದ ಪುನರ್ನಿರ್ಮಾಣವಾಗುವುದೆಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಮಹಾತ್ಮ ಗಾಂಧಿಯವರು, ಸ್ವಾತಂತ್ರ್ಯಪೂರ್ವದಲ್ಲಿ ಮತ್ತು ಸ್ವಾತಂತ್ರ್ಯೋತ್ತರದಲ್ಲಿ ಸ್ವತಂತ್ರ ಭವ್ಯ ಭಾರತದ ನಿರ್ಮಾಣದಲ್ಲಿ ಯುವಜನತೆಯ ಮೇಲೆ ಭರವಸೆ ಹೊಂದಿದ್ದರು. ವಿದ್ಯಾವಂತ ಯುವಕರು, ವಿಶೇಷತಃ ಗ್ರಾಮೀಣ ಪ್ರದೇಶಗಳಲ್ಲಿ ಮನೆಮನೆಗೆ ಹೋಗಿ ನಮ್ಮ ದೇಶವು ಹಿಂದುಳಿಯಲು ಕಾರಣವಾಗಿರುವ ತ್ರಿಮುಖ ಜಾಡ್ಯಗಳಾದ ಅನಕ್ಷರತೆ, ಅಜ್ಞಾನ (ಮೂಢನಂಬಿಕೆ) ಹಾಗೂ ರೋಗರುಜಿನಗಳನ್ನು ನಿರ್ಮೂಲಗೊಳಿಸಲು ತಿಳಿಯಹೇಳಬೇಕೆಂದು ಕರೆಕೊಡುತ್ತಿದ್ದರು. ಇಂದೂ ಸಹ ತ್ರಿಮುಖ ಜಾಡ್ಯಗಳ ಜೊತೆಗೆ ಬಡತನ ಮತ್ತು ನಿರುದ್ಯೋಗಗಳು ಮುಂದುವರಿಯುತ್ತಿರುವುದು ನಮ್ಮ ದೇಶದ ದುರ್ದೈವ.

ಅನಕ್ಷರತೆಯನ್ನು ತೊಡೆದುಹಾಕಬೇಕೆಂಬ ಉದ್ದೇಶದಿಂದ ಸಾಂಪ್ರದಾಯಿಕ ಕಡ್ಡಾಯ ಪ್ರಾಥಮಿಕ ಶಿಕ್ಷಣದ ಜೊತೆಗೆ, ರಾಜ್ಯ ಸರ್ಕಾರಗಳ ವಯಸ್ಕರ ಶಿಕ್ಷಣ ಸಮಿತಿಗಳು ಮತ್ತು ಭಾರತ ಸರ್ಕಾರದ ಸಾಕ್ಷರತಾ ಮಿಷನ್ ಕೆಲಸ ಮಾಡುತ್ತಿವೆ. ಈಗ್ಗೆ ಕೆಲವು ವರ್ಷಗಳ ಹಿಂದೆ ದೇಶದಲ್ಲಿ ಅನಕ್ಷರತೆ ನಿರ್ಮೂಲನೆಗೊಂಡಿದೆ ಎಂದು ಘೋಷಿಸಿದ್ದರೆಂಬ ನೆನಪು. ಹೆದ್ದಾರಿಗಳ ಜಿಲ್ಲಾ ಗಡಿಗಳಲ್ಲಿ "ಸಂಪೂರ್ಣ ಸಾಕ್ಷರತಾ ಜಿಲ್ಲೆ" ಗಳೆಂದು ಫಲಕಗಳನ್ನು ಹಾಕಿಸಿದ್ದರು. ಈಗಲೂ ಸಹ ಕೋಟ್ಯಂತರ ರೂಪಾಯಿಗಳನ್ನು ಖರ್ಚುಮಾಡಿ ಸಾಕ್ಷರತಾ ಆಂದೋಲನವನ್ನು ಮುಂದುವರಿಸುತ್ತಿದ್ದಾರೆ. ಇದು ಇನ್ನೂ ಎಷ್ಟು ವರ್ಷ ಮುಂದುವರಿಯಬೇಕೆಂಬುದನ್ನು ಕಾದುನೋಡಬೇಕು.

ಮೂಢನಂಬಿಕೆಯ ಬಗ್ಗೆ ಹೇಳುವುದಾದರೆ, ನಮ್ಮ ದೇಶದ ವಿದ್ಯಾವಂತರಲ್ಲೂ ಅದು ಮನೆ ಮಾಡಿದೆ. ಮಕ್ಕಳಲ್ಲಿ ಕಾರ್ಯಕಾರಣ ಸಂಬಂಧದ ಜ್ಞಾನ ಬೆಳೆಸಲು ಶಾಲೆಗಳಲ್ಲಿ ವಿಜ್ಞಾನ ಬೋಧಿಸುತ್ತಾರೆ. ಮಳೆ ಬರಬೇಕಾದರೆ ಮೋಡದಲ್ಲಿ ಆರ್ದ್ರತೆ ಉಂಟಾಗಬೇಕು; ನೀರಿನ ಹನಿಗಳು ಭಾರವಾಗಬೇಕು; ಗಾಳಿ ಅನುಕೂಲಕರವಾಗಿ ಬೀಸಬೇಕು. ಇಷ್ಟೆಲ್ಲಾ ಆದರೆ ಮಳೆ ಬರುತ್ತದೆ. ಮಳೆ ಬರುವುದಕ್ಕಾಗಿ ನಮ್ಮ ಸರ್ಕಾರದವರು ದೇವಾಲಯಗಳಲ್ಲಿ ಪೂಜೆ ಸಲ್ಲಿಸಲು ಆದೇಶಿಸಿದರು. ಮಳೆಗಾಗಿ ಕಪ್ಪೆ ಮದುವೆ, ಕತ್ತೆ ಮದುವೆ, ಪರ್ಜನ್ಯಜಪ, ರುದ್ರಹೋಮಗಳು ನಡೆಯುತ್ತಿವೆ. ಮಂತ್ರಕ್ಕೆ ಮಾವಿನಕಾಯಿ ಉದುರುವುದಿಲ್ಲವೆಂದು ಗೊತ್ತಿದ್ದರೂ ಜನರಿಂದ ಹಣ ವಸೂಲು ಮಾಡಿ, ಹಣವನ್ನು ಪೋಲು ಮಾಡಿ ಮಳೆಗಾಗಿ ನಾಟಕವಾಡುವ ಕಾರ್ಯಕ್ರಮಗಳನ್ನು ಕೆಲಮಂದಿ ಸ್ವಯಂಘೋಷಿತ ಜನಹಿತ ಚಿಂತಕರು ನಡೆಸುತ್ತಾರೆ. ಇದೇ ಹಣವನ್ನು ಬಡವರ ಏಳಿಗೆಗಾಗಲೀ, ಪರಿಸರ ಸಮತೋಲನಕ್ಕಾಗಿ ಮರಗಿಡಗಳನ್ನು ನೆಡುವುದಕ್ಕಾಗಲೀ ಉಪಯೋಗಿಸಿದರೆ ಸಾರ್ಥಕವಾದೀತು. ಇಷ್ಟೇ ಸಾಲದೆಂಬಂತೆ ತಮ್ಮ ಕಾರ್ಯಸಾಧನೆಗಾಗಿ ಭೂತ-ಪ್ರೇತಗಳಿಗೆ ಪಶುಬಲಿ-ಶಿಶುಬಲಿ-ನರಬಲಿಗಳನ್ನು ಕೊಡುವ ಧೂರ್ತರೂ ಇದ್ದಾರೆ.

> **ಮೂಢನಂಬಿಕೆಗಳೇ ಜನಾಂಗದ ಅವನತಿಗೆ ಕಾರಣ. ಅವು ಮಿದುಳನ್ನು ನಿಃಸತ್ವಗೊಳಿಸಿ ವ್ಯಕ್ತಿಯನ್ನು ಶಕ್ತಿಹೀನಗೊಳಿಸುತ್ತವೆ.** —*ಸ್ವಾಮಿ ವಿವೇಕಾನಂದ*

ಜವಹರಲಾಲ ನೆಹರೂರವರು ನಮ್ಮ ದೇಶದ ಯುವಕರು ವ್ಯಾಸಂಗಲಾಲಸರಾಗಬೇಕೆಂದು ಹೇಳುತ್ತಿದ್ದರು. ದೂರದರ್ಶನದ ಪ್ರಭಾವದಿಂದಲೋ ಅಥವಾ ವೃತ್ತಿಪರ ಶಿಕ್ಷಣದ ಪ್ರಭಾವದಿಂದಲೋ ನಮ್ಮ ದೇಶದ ಯುವಕರು ಪುರಾಣ, ಇತಿಹಾಸ, ಸ್ವಾತಂತ್ರ್ಯ ಸಂಗ್ರಾಮಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು

ಓದುವುದೇ ಇಲ್ಲ. ಇದರಿಂದಾಗಿ ಯುವಕರಲ್ಲಿ ಉತ್ತಮ ವ್ಯಕ್ತಿತ್ವ ಬೆಳೆಯುತ್ತಿಲ್ಲ. ಹೆಚ್ಚು ಹಣ ಸಂಪಾದಿಸುವುದೇ ಜೀವನದ ಅಂತಿಮ ಗುರಿಯಾಗಿದೆ.

ಕಳೆದ ಶತಮಾನದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ನಡೆದ ಸಂಶೋಧನೆಗಳ ಫಲ ಇಂದಿನ ಪೀಳಿಗೆಯ ಕೈಗೆಟುಕಿದೆ. ಸಾಂಕ್ರಾಮಿಕವಾಗಿದ್ದ ಸಿಡುಬು, ಮಲೇರಿಯಾ, ಕಾಲರಾ, ಪ್ಲೇಗು, ಕ್ಷಯ, ಹೈಡ್ರೋಫೋಬಿಯಾ ಮತ್ತು ಟಿಟನೆಸ್‌ನಂತಹ ಮಾರಕ ರೋಗಗಳನ್ನು ಹೊಡೆದೋಡಿಸಲು ಸಾಧ್ಯವಾಗಿದೆ. ಆದರೆ ಆಧುನಿಕ ಜೀವನದ ಒತ್ತಡದಿಂದ ಉಂಟಾಗುತ್ತಿರುವ ರಕ್ತದ ಏರೊತ್ತಡ, ಸಿಹಿಮೂತ್ರರೋಗ, ಕ್ಯಾನ್ಸರ್, ಹೆಪಟೈಟಿಸ್, ಹೃದಯಬೇನೆ ಮತ್ತು ಏಡ್ಸ್ ರೋಗಗಳಿಂದ ಪಾರಾಗಬೇಕಾದ ಸವಾಲು ನಮ್ಮೆದುರಿಗಿದೆ. ಈ ಖಾಯಿಲೆಗಳಿಗೆ ಚಿಕಿತ್ಸೆ ನೀಡಲು ಅನೇಕ ಸುಸಜ್ಜಿತ ಆಸ್ಪತ್ರೆಗಳಿವೆಯಾದರೂ ನಮ್ಮ ದೇಶದಲ್ಲಿ ಬಹುಸಂಖ್ಯಾತರಾಗಿರುವ ಬಡಜನರು, ಚಿಕಿತ್ಸೆಗೆ ತಗಲುವ ದುಬಾರಿ ವೆಚ್ಚವನ್ನು ಭರಿಸಲು ಶಕ್ತರಾಗಿಲ್ಲ. ವಿಶೇಷ ಸೌಕರ್ಯಗಳಿರುವ ಅನೇಕ ಸರ್ಕಾರಿ ಆಸ್ಪತ್ರೆಗಳಿವೆಯಾದರೂ ಅಲ್ಲಿಯ ವೈದ್ಯರುಗಳು ಹಾಗೂ ಇತರೆ ಸಿಬ್ಬಂದಿ ಬಡಜನರಿಗೆ ಉಚಿತ ಸೇವೆಯೊದಗಿಸುವ ಮನೋಭಾವದವರಾಗಿಲ್ಲ. ಈ ಕ್ಷೇತ್ರದಲ್ಲಿರುವ ಯುವಕರು ರಾಷ್ಟ್ರಪ್ರೇಮ ಮತ್ತು ಸೇವಾದೃಷ್ಟಿ ಬೆಳೆಸಿಕೊಂಡು ಕಾರ್ಯಪ್ರವೃತ್ತರಾಗಬೇಕಾದ ಅಗತ್ಯವಿದೆ.

ನಮ್ಮ ದೇಶದ ಇಂದಿನ ಯುವಕರು ಸ್ವಾತಂತ್ರ್ಯ ಹೋರಾಟಕ್ಕಾಗಿ ತಮ್ಮ ಸರ್ವಸ್ವವನ್ನೂ ತ್ಯಾಗಮಾಡಿದ ಮಹಾತ್ಮರುಗಳ ಬಗ್ಗೆ ತಿಳಿದಿರುವುದು ಅಪೇಕ್ಷಣೀಯ. ರಾಜಗುರು, ಸುಖದೇವ್, ಭಗತ್‌ಸಿಂಗ್, ಸಾವರ್ಕರ್, ಸುಭಾಷ್‌ಚಂದ್ರ ಬೋಸ್, ಕಿತ್ತೂರರಾಣಿ ಚೆನ್ನಮ್ಮ, ಝಾನ್ಸಿರಾಣಿ ಲಕ್ಷ್ಮೀಬಾಯಿ, ಸಿಂಧೂರ ಲಕ್ಷ್ಮಣ ಇವರುಗಳು ಕ್ರಾಂತಿಕಾರಿಗಳಾಗಿ ಬ್ರಿಟಿಷರ ವಿರುದ್ಧ ಹೋರಾಡಿ ತಮ್ಮ ಸರ್ವಸ್ವವನ್ನೂ ತ್ಯಾಗಮಾಡಿ, ಕೊನೆಗೆ ಹುತಾತ್ಮರಾದರು. ಮಹಾತ್ಮಾ ಗಾಂಧಿ, ಬಾಬು ರಾಜೇಂದ್ರ ಪ್ರಸಾದ್, ಜವಾಹರಲಾಲ ನೆಹರೂ, ವಲ್ಲಭಭಾಯಿ ಪಟೇಲ್, ಬಿ.ಆರ್.ಅಂಬೇಡ್ಕರ್, ಲಾಲ್ ಬಹದ್ದೂರ್ ಶಾಸ್ತ್ರಿ, ಕೆ.ಎಂ. ಮುನ್ಷಿ, ಸಿ.ರಾಜಗೋಪಾಲಾಚಾರಿ, ಟಿ.ಸುಬ್ರಹ್ಮಣ್ಯಂ, ಎ.ಜಿ. ರಾಮಚಂದ್ರ ರಾವ್, ಟಿ. ಚೆನ್ನಯ್ಯ, ಸಿದ್ಧಲಿಂಗಯ್ಯ, ಕೆ.ಟಿ. ಭಾಷ್ಯಂ, ಚೆನ್ನಿಗರಾಮಯ್ಯ, ಯಶೋಧರಮ್ಮ ದಾಸಪ್ಪ ಮೊದಲಾದ ಸಾವಿರಾರು ದೇಶಭಕ್ತರು ಅನೇಕ ವರ್ಷಗಳವರೆಗೆ ಹೋರಾಡಿ ಸೆರೆಮನೆ ವಾಸ ಅನುಭವಿಸಿದರು. ಬಾಲಗಂಗಾಧರ ತಿಲಕ್, ಅರವಿಂದ ಘೋಷ್, ಮೊಹರೆ ಹಣಮಂತರಾಯ ರಂತಹವರು ಪತ್ರಿಕೆಗಳ ಮೂಲಕ ಜನಜಾಗೃತಿಯನ್ನುಂಟುಮಾಡಿ, ಹೋರಾಟಕ್ಕೆ ಸಜ್ಜುಗೊಳಿಸಿದರು. ಇವರೆಲ್ಲರ ಹೋರಾಟದ ಫಲವಾಗಿ ೧೯೪೭ರ ಆಗಸ್ಟ್ ೧೫ರಂದು ನಮ್ಮ ದೇಶವು ಬ್ರಿಟಿಷರ ದಾಸ್ಯದಿಂದ ಮುಕ್ತಿ ಪಡೆಯಿತು.

ನಮ್ಮ ದೇಶದ ಇಂದಿನ ಜನಸಂಖ್ಯೆ ನೂರು ಕೋಟಿಗಿಂತ ಜಾಸ್ತಿ ಇದೆ. ಇವರಲ್ಲಿ ಶಿಶುಗಳು-ಬಾಲಕರು-ಪ್ರೌಢರು ಮೂವತ್ತು ಕೋಟಿ, ಯುವಕರು ನಲವತ್ತೈದು ಕೋಟಿ, ಮುದುಕರು ಇಪ್ಪತ್ತೈದು ಕೋಟಿ ಇರಬಹುದೆಂದು ಸ್ಥೂಲವಾಗಿ ಅಂದಾಜು ಮಾಡಬಹುದು. ಎಂದಮೇಲೆ ದೇಶದ ಮಾನವ ಸಂಪನ್ಮೂಲದಲ್ಲಿ ಯುವಕರೇ ಅಧಿಕ ಸಂಖ್ಯೆಯಲ್ಲಿದ್ದು ದೇಶವನ್ನು ಮುನ್ನಡೆಸುವ ಅಥವಾ ಅಧೋಗತಿಗಿಳಿಸುವ ಪ್ರಕ್ರಿಯೆಯಲ್ಲಿ ಮಹತ್ವದ ಸಂಖ್ಯೆ ಮತ್ತು ಪಾತ್ರ ಅವರದೇ ಆಗಿದೆ.

> **ವೀರ್ಯವಾನ್, ತೇಜಸ್ವೀ, ಶ್ರದ್ಧಾಸಂಪನ್ನ, ಕೊನೆಯವರೆಗೂ ನಿಷ್ಕಪಟಿಗಳಾದ ಯುವಕರು ಬೇಕಾಗಿದ್ದಾರೆ. ಇಂತಹ ನೂರು ಜನ ಸಿಕ್ಕಿದರೆ ಪ್ರಪಂಚವನ್ನೇ ಬದಲಾಯಿಸಬಹುದು!** —*ಸ್ವಾಮಿ ವಿವೇಕಾನಂದ*

ಯುವಶಕ್ತಿ ಹರಿಯುತ್ತಿರುವ ನೀರಿನ ಶಕ್ತಿ ಇದ್ದಂತೆ. ಹರಿಯುವ ನದಿಯ ಪ್ರವಾಹವನ್ನು ಹಾಗೆಯೇ ಬಿಟ್ಟರೆ ಅದು ನೆಲ ಹೊಲಗಳನ್ನು ಕೊಚ್ಚಿ, ವಸತಿ ಪ್ರದೇಶಗಳನ್ನು ಹಾಳುಗೆಡವಿ, ಜನಜೀವನವನ್ನು ಅಸ್ತವ್ಯಸ್ತಗೊಳಿಸುತ್ತದೆ. ಅಣೆಕಟ್ಟನ್ನು ನಿರ್ಮಿಸಿ, ಹರಿಯುವ ನೀರನ್ನು ಸಂಗ್ರಹಿಸಿದರೆ ನೀರಾವರಿ ಮತ್ತು ವಿದ್ಯುದುತ್ಪಾದನೆಗಳಿಗೆ ಉಪಯೋಗಿಸಿ ಜನಹಿತ ಕಾರ್ಯಗಳಿಗೆ ಬಳಸಬಹುದು. ಅಂತೆಯೇ ಯುವಶಕ್ತಿಯನ್ನು ಸ್ವೇಚ್ಛೆಯಾಗಿ ಹರಿಯಬಿಟ್ಟರೆ ಅವರು ಭಯೋತ್ಪಾದಕರು, ಕೊಲೆಗಾರರು, ಲಂಚಕೋರರು ಅಥವಾ ಕಳ್ಳಕಾಕರಾಗಿ ಜನಜೀವನದ ನೆಮ್ಮದಿಗೆ ಕಂಟಕಪ್ರಾಯರಾಗಬಹುದು.

ಭ್ರಷ್ಟ ರಾಜಕಾರಣಿಗಳು, ಭೂಗತ ದೊರೆಗಳು ಯುವಕರಿಗೆ ಹಣದ ಆಮಿಷ ತೋರಿಸಿ ಬುಡಮೇಲು ಕೃತ್ಯಗಳಿಗೆ ಅವರನ್ನು ಉಪಯೋಗಿಸಿಕೊಳ್ಳುತ್ತಾರೆ ಮತ್ತು ದೇಶದ ನೆಮ್ಮದಿಯೊಂದಿಗೆ ಚೆಲ್ಲಾಟವಾಡುತ್ತಾರೆ. ಈ ಸಂದರ್ಭದಲ್ಲಿ ಯುವಜನತೆ ತಮ್ಮ ದೈಹಿಕ ಮತ್ತು ಬೌದ್ಧಿಕ ಶಕ್ತಿಯನ್ನು ಉದಾತ್ತೀಕರಿಸಿಕೊಂಡು ದೇಶಹಿತಕ್ಕಾಗಿ ಬಳಸಬೇಕಾಗಿದೆ. ಸ್ವಾತಂತ್ರ್ಯಾನಂತರದ ಕೆಲವು ವರ್ಷಗಳಲ್ಲಿ—ಮುಖ್ಯವಾಗಿ ನೆಹರೂರವರು ಪ್ರಧಾನಮಂತ್ರಿಯಾಗಿದ್ದ ಅವಧಿಯಲ್ಲಿ—ದೇಶ ಕಟ್ಟುವ ಕೆಲಸ ಭರದಿಂದ ಸಾಗಿ, ದೇಶದ ಅನೇಕ ಕಡೆಗಳಲ್ಲಿ ಅಣೆಕಟ್ಟುಗಳು, ಸಾರ್ವಜನಿಕ ರಂಗದ ಕೈಗಾರಿಕೆಗಳು ಸ್ಥಾಪನೆಯಾಗಿ, ಸಾಕಷ್ಟು ಉದ್ಯೋಗ ಸೃಷ್ಟಿಯಾಗಿ, ಜನರು ನೆಮ್ಮದಿಯ ಉಸಿರುಬಿಡುವಂತಾಗಿದ್ದಿತು. ಆಗ ಭ್ರಷ್ಟಾಚಾರ ಮತ್ತು ದೇಶದ್ರೋಹದ ಕೆಲಸಗಳು ಎದ್ದು ಕಾಣುವಷ್ಟಿರಲಿಲ್ಲ. ಇತ್ತೀಚಿನ ದಿನಗಳಲ್ಲಿ ರಾಜ್ಯ ಮತ್ತು ರಾಷ್ಟ್ರಮಟ್ಟದ ಅನೇಕ ಭ್ರಷ್ಟಾಚಾರದ ಹಗರಣಗಳು ಮನೆಮಾತಾಗಿವೆ. ಜ್ಞಾಪಕವಿರುವ ಕೆಲವು ಹಗರಣಗಳನ್ನು ಹೆಸರಿಸಬಹುದು : ಐವತ್ತು ಲಕ್ಷ ರೂಪಾಯಿಗಳನ್ನು ಫೋನ್‌ಕರೆಯಿಂದ ತರಿಸಿಕೊಂಡ ನಗರವಾಲಾ ಪ್ರಕರಣ, ಸುಖರಾಂರ ಟೆಲಿಕಾಂ ಹಗರಣ, ಹರ್ಷದ್ ಮೆಹ್ತಾರ ಷೇರು ಹಗರಣ, ಇತ್ತೀಚಿನ ಛಾಪಾ

ಕಾಗದದ ಹಗರಣ—ಹೀಗೆಯೇ ಅನೇಕ ಕೋಟಿ ರೂಪಾಯಿಗಳನ್ನು ಎತ್ತಿಹಾಕಿದ ಎಷ್ಟೋ ಪ್ರಕರಣಗಳಿರಬಹುದು.

ನಮ್ಮ ದೇಶದಲ್ಲಿ ಅನೇಕ ಜಾತಿ-ಮತ-ವರ್ಗಗಳಿದ್ದರೂ, ದೇಶದ ಐಕ್ಯತೆಯ ದೃಷ್ಟಿಯಿಂದ ಇವುಗಳ ನಡುವೆ ಸಂಘರ್ಷ ಇರಬಾರದು. ಆದರೆ ನಾವು ನಿತ್ಯವೂ ಮಾಧ್ಯಮಗಳ ಮೂಲಕ ಕೋಮುಗಲಭೆ, ವರ್ಗಸಂಘರ್ಷಗಳ ಸುದ್ದಿಯನ್ನೇ ಕೇಳುತ್ತೇವೆ. ಸಂವಿಧಾನದಲ್ಲಿ ಸಕಲರಿಗೂ ಸಮಾನವಾದ ಅವಕಾಶವನ್ನು ಕಲ್ಪಿಸಬೇಕೆಂದು ವಿಧಿಸಿದೆಯಾದರೂ ಈ ಬಗ್ಗೆ ಪ್ರಾಮಾಣಿಕ ಪ್ರಯತ್ನ ನಡೆಯುತ್ತಿಲ್ಲ. ಶ್ರೀಮಂತರು ಮತ್ತು ಪ್ರಭಾವಿಗಳು ಸಕಲ ಸವಲತ್ತುಗಳನ್ನೂ ಬಾಚಿಕೊಂಡು, ಇನ್ನೂ ಹೆಚ್ಚು ಶ್ರೀಮಂತರಾಗುತ್ತಿದ್ದಾರೆ. ಇಡೀ ದೇಶದ ಉದ್ದಗಲಗಳಲ್ಲಿ ಭ್ರಷ್ಟಾಚಾರ, ಲಂಚಕೋರತನ ಮತ್ತು ಪಕ್ಷಪಾತಗಳು ತಾಂಡವ ವಾಡುತ್ತಿವೆ. ಬಡವರು ಮತ್ತು ಅವಕಾಶ ವಂಚಿತರ ಅಭಿವೃದ್ಧಿ ಮರೀಚಿಕೆಯಾಗಿದೆ. ದೇಶದಲ್ಲಿ ಸಾಕಷ್ಟು ಜನ ವಿಚಾರವಂತರೂ, ಪ್ರಾಮಾಣಿಕರೂ ಇದ್ದರೂ, ಅವರು ನಿಸ್ಸಹಾಯಕರೂ ಮೂಕಪ್ರೇಕ್ಷಕರೂ ಆಗಿದ್ದಾರೆ. ದೇಶಕ್ಕೆ ಇದೊಂದು ಪರ್ವಕಾಲ. ಇಂತಹ ಕಠಿಣ ಪರಿಸ್ಥಿತಿಯಿಂದ ದೇಶವನ್ನು ರಕ್ಷಿಸುವವರಾರು? ದೇಶದಲ್ಲಿ ಸಂಖ್ಯಾಬಾಹುಳ್ಯವುಳ್ಳವರೂ, ದೈಹಿಕ-ಮಾನಸಿಕ ಸಾಮರ್ಥ್ಯ ಹೊಂದಿದವರೂ ಆದ ಯುವಜನರು ಜಾಗ್ರತರಾಗಬೇಕು. ದೇಶದಲ್ಲಿ ಉದ್ಯೋಗದಲ್ಲಿರುವ ಯುವಕರ ಸಂಖ್ಯೆಗಿಂತಲೂ ನಿರುದ್ಯೋಗಿಗಳ ಸಂಖ್ಯೆ ಜಾಸ್ತಿಯಾಗಿದೆ. ಇವರೆಲ್ಲರೂ ಯಾರಿಂದಲೋ ಸಹಾಯ ಸಿಕ್ಕುವುದೆಂದು ಕಾದು ಕೂರುವುದರಲ್ಲಿ ಅರ್ಥವಿಲ್ಲ. ಆಂಗ್ಲ ಕವಿತೆಯೊಂದರ ಸಾಲುಗಳು ಹೀಗಿವೆ:

Standing at the foot boys,
Looking at the sky
How can you get up boys,
If you never try?

ಬೆಟ್ಟದ ಬುಡದಲ್ಲಿ ನಿಂತು ಆಕಾಶ ನೋಡುತ್ತಿದ್ದರೆ ಬೆಟ್ಟ ಹತ್ತಲಾದೀತೆ? ಶ್ರಮಪಟ್ಟು ಹೆಜ್ಜೆ ಹಾಕಬೇಕಲ್ಲವೇ? ಸ್ವಪ್ರಯತ್ನದಲ್ಲಿ ಭರವಸೆ ಇಟ್ಟು, ಬ್ಯಾಂಕಿನಿಂದಲೋ, ಸ್ವಯಂ ಸೇವಾಸಂಸ್ಥೆಯಿಂದಲೋ, ಅಥವಾ ಬಂಧುಮಿತ್ರರಿಂದಲೋ ಸಹಾಯ ಸಹಕಾರ ಪಡೆದು ಚಿಕ್ಕ ಕೈಗಾರಿಕೆ, ವ್ಯಾಪಾರ, ಯಂತ್ರ ದುರಸ್ತಿ, ಗೃಹಾಲಂಕಾರ, ಗಾರೆ ಕೆಲಸ—ಇಂತಹ ಯಾವುದಾದರೊಂದು ವೃತ್ತಿಯನ್ನು ಕೈಗೊಂಡು ದೇಶದ ಮುಖ್ಯ ವಾಹಿನಿಯಲ್ಲಿ ಸೇರಿಕೊಳ್ಳುವುದರ ಮೂಲಕ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಿಕೊಳ್ಳಬಹುದಲ್ಲವೆ?

**ಉತ್ತಿಷ್ಠತ, ಜಾಗ್ರತ, ಪ್ರಾಪ್ಯವರಾನ್ನಿಬೋಧತ**—"ಏಳಿ, ಎದ್ದೇಳಿ, ಜಾಗ್ರತರಾಗಿ, ಗುರಿಮುಟ್ಟುವವರೆಗೂ ನಿಲ್ಲದಿರಿ" ಎಂಬ ವಿವೇಕಾನಂದ ವಾಣಿಯಿಂದ ಸ್ಫೂರ್ತಿ ಪಡೆದು, ತಮ್ಮ ತಮ್ಮ ಕ್ಷೇತ್ರಗಳಲ್ಲಿ ಪ್ರಾಮಾಣಿಕತೆಯಿಂದಲೂ, ದೇಶಾಭಿಮಾನದಿಂದಲೂ ಕಾರ್ಯಪ್ರವೃತ್ತರಾದರೆ ನಮ್ಮೆಲ್ಲರ ಕನಸಿನ ಭಾರತ ಸುಖದ ಬೀಡಾದೀತು. ◆

## ಕಲಿಕೆ ಕೊರಳಿಗೆ ಕುಣಿಕೆಯಾಗದಿರಲಿ

ಗುರುವೊಬ್ಬನು ಯುವಶಿಷ್ಯರಿಗೆ ಬೋಧಿಸುತ್ತಿದ್ದನು. ಸತ್ತವರನ್ನು ಬದುಕಿಸುವ ಮಂತ್ರವೊಂದನ್ನು ತಮಗೆ ಉಪದೇಶಿಸಬೇಕೆಂದು ಶಿಷ್ಯರು ಕೇಳಿಕೊಂಡರು.

"ಅಂತಹ ಮಂತ್ರದಿಂದ ನಿಮಗೇನು ಪ್ರಯೋಜನ?" ಎಂದು ಗುರು ಕೇಳಿದ.

"ವಿಶೇಷವೇನಿಲ್ಲ. ನಮ್ಮ ಶ್ರದ್ಧೆಯನ್ನು ಬಲಗೊಳಿಸುವುದಕ್ಕಾಗಿ ಕೇಳುತ್ತಿದ್ದೇವೆ, ಅಷ್ಟೆ."

"ಸಾಕಷ್ಟು ಪರಿಪಕ್ವತೆಯಿಲ್ಲದ ಜ್ಞಾನ ಅಪಾಯಕಾರಿ" ಎಂದು ಗುರು ದಯಾಪೂರ್ಣ ಧ್ವನಿಯಲ್ಲಿ ನುಡಿದ.

"ಹೇಗೆ?" ಎಂದು ಉದ್ಧಟತನದಿಂದ ಪ್ರಶ್ನಿಸಿದರು ಶಿಷ್ಯರು. ಗುರು ಉತ್ತರಿಸಿದ : "ಜ್ಞಾನವು ಶಕ್ತಿಯನ್ನು ನೀಡುತ್ತದೆ. ಆದರೆ ಆ ಶಕ್ತಿಯನ್ನು ಹೇಗೆ ಬಳಸಬೇಕೆಂಬ ವಿವೇಕ ಇಲ್ಲದಿದ್ದರೆ ಅದು ಅಪಾಯಕಾರಿ."

ಶಿಷ್ಯರು ಗುರುವಿನ ಈ ವಿವೇಕವಾಣಿಗೆ ಕಿವಿಗೊಡಲಿಲ್ಲ. ತಮಗೆ ಆ ಮಂತ್ರವನ್ನು ಉಪದೇಶಿಸಲೇಬೇಕೆಂದು ಒತ್ತಾಯಿಸಿದರು. ಗುರುವು, ತನಗಿಷ್ಟವಿಲ್ಲದಿದ್ದರೂ, ಅನಿವಾರ್ಯವಾಗಿ ಮಂತ್ರವನ್ನು ಶಿಷ್ಯರಿಗೆ ಉಪದೇಶಿಸಿದನು. ತುಂಬ ವಿವೇಕಯುಕ್ತವಾಗಿ ಇದನ್ನು ಉಪಯೋಗಿಸಬೇಕೆಂದು ಬುದ್ಧಿವಾದ ಹೇಳಿದನು.

ಸ್ವಲ್ಪ ಕಾಲದ ನಂತರ ಆ ಯುವಶಿಷ್ಯರು ಒಮ್ಮೆ ಮರುಭೂಮಿಯಲ್ಲಿ ಹೋಗುತ್ತಿರುವಾಗ ಒಂದು ಮೂಳೆಗಳ ರಾಶಿಯನ್ನು ನೋಡಿದರು. ಅವರ ಕುತೂಹಲ ಕೆರಳಿತು, ಮಂತ್ರಶಕ್ತಿಯನ್ನು ಪರೀಕ್ಷಿಸಬೇಕೆಂದು ಅವರು ನಿರ್ಧರಿಸಿದರು. ಮುಂದಿನ ಪರಿಣಾಮದ ಬಗ್ಗೆ ಅವರು ಚಿಂತಿಸಲೇ ಇಲ್ಲ. ಅವರು ಏಕಾಗ್ರ ಚಿತ್ತದಿಂದ ದೀರ್ಘಕಾಲ ಧ್ಯಾನ ಮಾಡಿ, ತಮ್ಮೆಲ್ಲ ಮನಶ್ಶಕ್ತಿಯೊಡನೆ ಮಂತ್ರವನ್ನು ವಿಧಿವತ್ತಾಗಿ ಉಚ್ಚರಿಸಿದರು.

ಕ್ರಮೇಣ ಮೂಳೆಗಳಲ್ಲಿ ಜೀವಕಳೆ ಕಾಣಿಸಿಕೊಳ್ಳತೊಡಗಿತು. ಸ್ವಲ್ಪ ಹೊತ್ತಿನಲ್ಲಿಯೇ ರಕ್ತಮಾಂಸಾದಿಗಳೊಂದಿಗೆ ಅವು ಮೈತಳೆದು ನಿಂತವು. ಶಿಷ್ಯರು ನೋಡುತ್ತಾರೆ, ತಮ್ಮ ಮುಂದೆ ಅತ್ಯಂತ ಕ್ರೂರ ತೋಳಗಳು ನಿಂತಿವೆ. ಅವೋ ಹಸಿದಿದ್ದವು. ಶಿಷ್ಯರು ಕೂಡಲೇ ಕಾಲಿಗೆ ಬುದ್ಧಿ ಹೇಳಿದರು. ಆದರೆ ತೋಳಗಳು ಅವರನ್ನು ಅಟ್ಟಿಸಿಕೊಂಡು ಹೋಗಿ, ಅವರ ಮೇಲೆ ಎರಗಿ, ಅವರನ್ನು ಸಿಗಿದು ಕೊಂದು ತಮ್ಮ ಹಸಿವನ್ನು ನೀಗಿಸಿಕೊಂಡವು.

ಯುವಕರು ಜ್ಞಾನಸಂಪಾದನೆಯೊಂದಿಗೆ ವಿವೇಕವನ್ನೂ ನೈತಿಕ ಹೊಣೆಗಾರಿಕೆಯನ್ನೂ ಸಂಪಾದಿಸದಿದ್ದರೆ—ವಿದ್ಯೆಯೊಡನೆ ಬುದ್ಧಿಯೂ ಬೆಳೆಯದಿದ್ದರೆ—ಆ ಜ್ಞಾನ ವೈಯಕ್ತಿಕ ಮತ್ತು ಸಾಮಾಜಿಕ ನಾಶಕ್ಕೆ ಕಾರಣವಾಗಬಹುದು. ◆